# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.260-2019** **ಪಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಕೆ.ಮಹದೇವವಪ್ಪ<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 22-08-2022. |

**<u>ಪಾಟೀ ಸವಾಲುಃ ಶ್ರೀ ಆರ್.ಎಂ.ಎಸ್ ವಕೀಲರಿಂದಃ</u>**

ನನ್ನ ಜಮೀನಿನ ಸರ್ವೆ ನಂ.20/1 ಆಗಿದ್ದು, ಅದರ ವಿಸ್ತೀರ್ಣ 3 ಎಕರೆ 5 ಗುಂಟೆ ಇರುತ್ತದೆ. ಸದರಿ ಜಮೀನು ನಾನು ಕ್ರಯ ಪತ್ರದ ಮುಖೇನ ಶ್ರೀನಂಜಪ್ಪನವರಿಂದ ಕ್ರಯಕ್ಕೆ ಪಡೆದಿರುತ್ತೇನೆ. ದಾವಾ ಸ್ವತ್ತನ್ನು ಕ್ರಯಕ್ಕೆ ಪಡೆದು ಸುಮಾರು 40 ವರ್ಷಗಳಾಗಿರುತ್ತವೆ ನಾನು ದಾವಾ ಸ್ವತ್ತಿನ ಚೆಕ್ಕುಬಂದಿ ಹೇಳಬಲ್ಲೆ, ಪೂರ್ವಕ್ಕೇ-ಸುರೇಶ್ ಬಿನ್ ಕೆಂಚಪ್ಪ, ಪಶ್ಚಿಮಕ್ಕೇ-ಸರ್ಕಾರಿ ನೀರು ಹರಿಯುವ ಹಳ್ಳ, ಉತ್ತರಕ್ಕೇ- ಸರ್ಕಾರಿ ದಾರಿ ಮತ್ತು ಚಿಕ್ಕಸ್ವಾಮಪ್ಪನವರು ಜಮೀನು ಮತ್ತು ದಕ್ಷಿಣಕ್ಕೇ-ಪ್ರತಿವಾದಿಗಳ ಜಮೀನು ಇರುತ್ತದೆ. ದಾವಾ ಸ್ವತ್ತಿನ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ಸಾಕ್ಷಿ ಮುಂದುವರೆದು ಕ್ರಯ ಪತ್ರದ ಜೆರಾಕ್ಸ್ ಪ್ರತಿಯನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ

2. ದಾವಾ ಸ್ವತ್ತನ್ನು ನಾನು ಕ್ರಯಕ್ಕೆ ಪಡೆದ ನಂತರ ಪೋಡು ಆಗಿರುತ್ತದೆ ನಾನು ಕ್ರಯಕ್ಕೆ ಪಡೆಯುವ ಪೂರ್ವದಲ್ಲಿ ದಾವಾ ಸ್ವತ್ತಿನ ಸರ್ವೆ ನಂ.20 ಆಗಿದ್ದು, ಅದರ ವಿಸ್ತೀರ್ಣ 5 ಎಕರೆ 0.35 ಗುಂಟೆ ಸ್ವತ್ತು ಇತ್ತು. ನಾನು 5 ಎಕರೆ 35 ಗುಂಟೆ ಸ್ವತ್ತಿನ ಪೈಕಿ ಮಧ್ಯಭಾಗದ ಸ್ವತ್ತನ್ನು ಕ್ರಯಕ್ಕೆ ಪಡೆದಿರುತ್ತೇನೆ ಸರ್ವೆ ನಂ.20 ರ ಒಟ್ಟು ವಿಸ್ತೀರ್ಣ 5 ಎಕರೆ 35 ಗುಂಟೆ ಪೈಕಿ ಪೂರ್ವ ಭಾಗದ 1 ಎಕರೆ 30 ಗುಂಟೆ ಸ್ವತನ್ನು ಸುರೇಶ ರವರು ಕ್ರಯಕ್ಕೆ ಪಡೆದಿರುತ್ತಾರೆ ಪಶ್ಚಿಮದ ಭಾಗದ 1 ಎಕರೆ ಸ್ವತ್ತನ್ನು ಚಿಕ್ಕಸ್ವಾಮಪ್ಪನವರು ಕ್ರಯಕ್ಕೆ ಪಡೆದಿರುತ್ತಾರೆ ಸರ್ವೆ ನಂ.20 ಒಟ್ಟು 3 ಪೋಡುಗಳು ಆಗಿದ್ದು, ಸರ್ವೆ ನಂ.20/1 ನನಗೆ ಸೇರಿದ್ದಾಗಿದ್ದು, ಸರ್ವೆ ನಂ.20/2 ಸುರೇಶ ಹಾಗೂ ಸರ್ವೆ ನಂ.20/3 ಚಿಕ್ಕಸ್ವಾಮಪ್ಪನವರಿಗೆ ಸೇರಿದ್ದಾಗಿರುತ್ತದೆ. ನಾನು ದಾವಾ ಸ್ವತ್ತನ್ನು ಕ್ರಯಕ್ಕೆ ಪಡೆದ ನಂತರ 2 ಬಾರಿ ಅಳತೆ ಮಾಡಿಸಿರುತ್ತೇನೆ. ಅಳತೆ ಮಾಡಿಸುವ ಸಮಯ ಸುತ್ತ-

ಮುತ್ತಲಿನ ಬಾಜುದಾರರಿಗೆ ನೋಟಿಸ್ ನೀಡಿರುತ್ತೇನೆ. ನಾನು ಸರ್ಕಾರದ ವತಿಯಿಂದ ಮತ್ತು ಖಾಸಗಿಯಾಗಿ ಸ್ವತ್ತನ್ನು ಅಳತೆ ಮಾಡಿಸಿರುತ್ತೇನೆ, ಅದರೆ ಈ ಸಂಬಂಧ ನಾನು ದಾಖಲೆಯನ್ನು ಪಡೆದುಕೊಂಡಿರುವುದಿಲ್ಲ. ನಾನು ಹೆಳುವಂತೆ ದಾವಾ ಸ್ವತ್ತನ್ನು 2 ಬಾರಿ ಅಳತೆ ಮಾಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಒಂದು ವೇಳೆ ನಾನು ಅಳತೆ ಮಾಡಿಸಿದ್ದ ಪಕ್ಷದಲ್ಲಿ ಸರ್ವೆ ಸ್ಕೆಚ್ ಅನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತಿದ್ದು, ನಾನು ಅಳತೆ ಮಾಡಿಸಿಲ್ಲವಾದ ಕಾರಣ ಸರ್ವೆ ಸ್ಕೆಚ್ ಅನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ದಕ್ಷಿಣಕ್ಕೆ ಪ್ರತಿವಾದಿಗಳಿಗೆ ಸೇರಿದ ಜಮೀನು ಇರುತ್ತದೆ ಎಂದರೆ ಸರಿ. ಪ್ರತಿವಾದಿಗಳಿಗ ಸೇರಿದ 10 ಅಡಿ ಜಮೀನನ್ನು ನಾನು ಒತ್ತುವರಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಒತ್ತುವರಿ ಸಂಬಂಧ ಪ್ರತಿವಾದಿಗಳು ಆಳತೆ ಮಾಡಿಸಿ ಒತ್ತುವರಿಯನ್ನು ಬಿಟ್ಟುಕೊಡುವಂತೆ ನನ್ನನ್ನು ಕೇಳಿಕೊಂಡರು ಸಹ ನಾನು ಅಳತೆ ಮಾಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹದ್ದುಬಸ್ತು ಕಲ್ಲುಗಳನ್ನು ಪ್ರತಿವಾದಿಗಳು ಕಿತ್ತು ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಹೇಳುವಂತೆ ಪ್ರತಿವಾದಿಗಳು ಪ್ರತಿವಾದಿಗಳು ಯಾವುದೇ ಹದ್ದುಬಸ್ಥು ಕಲ್ಲುಗಳನ್ನು ಕಿತ್ತುಹಾಕಿರುವುದಿಲ್ಲ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು ಸಮಯಾವಶಕಾಶ ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**